ಆ) ಮೇಲೆ ತಿಳಿಸಿದ ಸಂದರ್ಭದಲ್ಲಿ ಸರ್ಕಾರವು ಕ್ರಮ ತೆಗೆದುಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಕನಿಷ್ಠ ಕೂಲಿ ನಿಗದಿ ಮಾಡುವ ಬಗ್ಗೆ

೮ (೨೫೭)(೧) ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಕಂದಾಯ ಯೋಜನಾ ಮತ್ತು ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಕನಿಷ್ಠ ಕೂಲಿಯನ್ನು ಒಂದೊಂದು ಕೈಗಾರಿಕೆಗೆ ಒಂದೊಂದು ರೀತಿಯಲ್ಲಿ ನಿಗದಿ ಮಾಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ :—

ಆ) ಕನಿಷ್ಠ ಕೂಲಿ ನಿಗದಿಯಲ್ಲಿ ಏಕ ರೂಪತೆ ಇರಬೇಕೆಂಬ ತತ್ವವನ್ನು ಕರ್ನಾಟಕದ ಉಚ್ಚ ನ್ಯಾಯಾಲಯ ತೀರ್ಮಾನಿಸಿಲ್ಲವೇ ?

ಇ) ಹಾಗಿದ್ದಲ್ಲಿ, ಏಕರೂಪತೆ ತರಲು ಸರ್ಕಾರದವರು ಕೈಗೊಳ್ಳುವ ಕ್ರಮಗಳೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಯೋಜನಾ ಹಾಗೂ ಕಾರ್ಮಿಕ ಸಚಿವರು).—

ಅ) ಹೌದು. ಕನಿಷ್ಠ ಕೂಲಿಯನ್ನು ಒಂದೊಂದು ಉದ್ಯಮಕ್ಕೂ ಪ್ರತ್ಯೇಕವಾಗಿ ಮತ್ತು ಆದರಲ್ಲಿ ಸೇರಿರುವ ಬೇರೆ ಬೇರೆ ಉದ್ಯೋಗಗಳಿಗೆ ಯೋಗ್ಯವಾದಂತೆ ನಿಗದಿ ಮಾಡಲಾಗುತ್ತಿದೆ. ನಿಗದಿ ಮಾಡುವ ಮೊದಲು ಕರಡು ಪ್ರಕಟಣೆಯನ್ನು ಹೊರಡಿಸಿ ಆದಕ್ಕೆ ಉತ್ತರವಾಗಿ ಬಂದ ಸಲಹೆಗಳನ್ನು ಮತ್ತು ಕನಿಷ್ಠ ಕೂಲಿ ಸಲಹಾ ಮಂಡಳಿಯ ಸಲಹೆಗಳನ್ನು ಲೆಕ್ಕಕ್ಕೆ ತೆಗೆದುಕೊಂಡು ನಿಗದಿ ಮಾಡಲಾಗುತ್ತಿದೆ.

ಆ) ಉಚ್ಚ ನ್ಯಾಯಾಲಯವು ವಿವಿಧ ಉದ್ಯಮಗಳಲ್ಲಿ ಏಕರೂಪ ಕನಿಷ್ಠ ವೇತನವಿರಬೇಕೆಂದು ತೀರ್ಮಾನಿಸಿಲ್ಲ. ಆದರೆ ವಿವಿಧ ಉದ್ಯಮಗಳಲ್ಲಿ ಕೆಲಸ ಮಾಡುವ ಕೆಲವು ವರ್ಗದ ಕಾರ್ಮಿಕರಿಗೆ ವೇತನದಲ್ಲಿ ಹೆಚ್ಚಿನ ವ್ಯತ್ಯಾಸವಿರದ ಹಾಗೆ ನೋಡಿಕೊಳ್ಳಬೇಕೆಂದು ಅಭಿಪ್ರಾಯಪಟ್ಟಿದೆ.

ಇ) ಎಲ್ಲ ಉದ್ಯಮಗಳಿಗೆ ಒಂದೇ ಕನಿಷ್ಠ ಕೂಲಿಯನ್ನು ನಿಗದಿ ಮಾಡುವುದು ಸಾಧ್ಯವಿಲ್ಲ. ರಾಜ್ಯ ಉಚ್ಚ ನ್ಯಾಯಾಲಯವು ತಿಳಿಸಿರುವ ಕೆಲವು ಸಮಾನ ವರ್ಗಗಳಲ್ಲಿ ಏಕ ರೀತಿಯ ಕನಿಷ್ಠ ವೇತನವನ್ನು ನಿಗದಿಮಾಡುವಲ್ಲಿ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುತ್ತಿದೆ.

ಕಾರ್ಮಿಕ ವಿವಾದಗಳ ಕಾಯ್ದೆ ಮತ್ತು ಟ್ರೇಡ್ ಯೂನಿಯನ್ ಕಾಯ್ದೆಗಳ ತಿದ್ದುಪಡಿಯ ಬಗ್ಗೆ

೯ (೨೪೧ ೧) ಶ್ರೀ ಟಿ. ಎಸ್. ಮಣಿ (ಕೆ. ಜಿ. ಎಫ್).—ಮಾನ್ಯ ಕಂದಾಯ, ಯೋಜನಾ ಮತ್ತು ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಕೇಂದ್ರ ಸರ್ಕಾರದವರು ಕಾರ್ಮಿಕ ವಿವಾದಗಳ ಕಾಯ್ದೆ ಮತ್ತು ಟ್ರೇಡ್ ಯೂನಿಯನ್ ಕಾಯ್ದೆಯನ್ನು ತಿದ್ದುಪಡಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಕಾರ್ಮಿಕ ಮಂತ್ರಿಗಳ ಸಮ್ಮೇಳನ ಮತ್ತು ಭಾರತೀಯ ಕಾರ್ಮಿಕ ಸಭೆಯಲ್ಲಿ ರಾಜ್ಯದ ಕಾರ್ಮಿಕ ಸಚಿವರು ಈ ಬಗ್ಗೆ ತೆಗೆದುಕೊಂಡ ನಿಲುವು ಏನು?

ಇ) ಕೇಂದ್ರ ಸರ್ಕಾರದವರು ಸದರಿ ತಿದ್ದುಪಡಿಗಳ ಬಗ್ಗೆ ರಾಜ್ಯ ಸರ್ಕಾರವನ್ನು ಸಂಪರ್ಕಿಸಿದ್ದಾರೆಯೆ? ಹಾಗಾದರೆ, ಈ ಬಗ್ಗೆ ರಾಜ್ಯ ಸರ್ಕಾರದ ಅಭಿಪ್ರಾಯವೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನಾ ಹಾಗೂ ಕಾರ್ಮಿಕ ಸಚಿವರು).—

ಅ) ಕೇಂದ್ರ ಸರ್ಕಾರದಿಂದ ಯಾವ ಅಧಿಕೃತ ಮಾಹಿತಿಯೂ ಬಂದಿರುವುದಿಲ್ಲ. ಸುದ್ದಿಪ್ರಸಾರ ಮಾಧ್ಯಮಗಳ ಗಮನಕ್ಕೆ ಬಂದಿರುತ್ತದೆ.